ಸೋಂದಾ ಸ್ವರ್ಣವಲ್ಲಿ ಮಠದಲ್ಲಿ ನಡೆದ ಕೆರೆ ಸಮ್ಮೇಳನ ಸಮಾರೋಪ

# ಅಂತರಂಗದ ಮಾಲಿನ್ಯ ತೊಳೆಯಲು ಸಂತರು ಶ್ರಮಿಸಲಿ

ಸಂಯುಕ್ತ ಕರ್ನಾಟಕ 16/11/2014, Page no 13

(41)

**ಶಿರಸಿ, ನ.15:** ಅತ್ಯಾಚಾರ ಮಿತಿ ಮೀರಿದೆ. ಗೋವು, ಬೆಟ್ಟ, ಮರ, ಗಿಡಗಳಲ್ಲಿ ದೇವರನ್ನು ಕಂಡು ಪೂಜಿಸಲು ಕೃಷ್ಣ ಕೊಟ್ಟ ಮಾರ್ಗದರ್ಶನ ಪ್ರಕೃತಿ ಪೂಜೆ. ಭೂಮಿ, ಕೆರೆ, ನದಿಗಳ ಅತಿಕ್ರಮಣ ಮಿತಿ ಮೀರಿದೆ. ಮನುಷ್ಯ, ಪ್ರಾಣಿ, ಪರಿಸರದ ಮೇಲೆ ಆಕ್ರಮಣ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಯಂತ್ರ, ತಂತ್ರಗಳಿಂದ ಮಲೀನವಾದ ಈ ವಾತಾವರಣ ಶುದ್ಧವಾಗಲು ಮಂತ್ರವೇ ಬೇಕು ಎಂದು ಪೇಜಾವರ ಮಠಾಧೀಶ ವಿಶ್ವೇಶ್ವರ ತೀರ್ಥ ಮಹಾಸ್ವಾಮಿಗಳು ಹೇಳಿದರು.

ಶನಿವಾರ ಸಂಜೆ ತಾಲೂಕಿನ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಸುಧರ್ಮಾ ಸಭಾಂಗಣದಲ್ಲಿ ನಡೆದ ಕೆರೆ ಸಮ್ಮೇಳನ 2014ರ ಸಮಾರೋಪ ಸಮಾರಂಭದಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಒಂದು ಕೆರೆ ನಿರ್ಮಾಣ ಅನೇಕ ಪ್ರಾಣಿ- ಪಕ್ಷಿ, ಜನರಿಗೆ ಆಶ್ರಯ ನೀಡುತ್ತದೆ. ಮರ-ಗಿಡಗಳ ಕೊರತೆಯಿಂದ ಕೆರೆ, ನದಿ ಕೆಟ್ಟಿದೆ. ನದಿಗಳಿಗೆ ಹರಿವಿನುದ್ದಕ್ಕೂ ಆಣೆಕಟ್ಟೆ ನಿರ್ಮಾಣ, ಕಾರ್ಖಾನೆ ಕೊಳೆ ಗಂಗಾ ನದಿಗೆ ಹೊರಟಿದೆ. ಇಂತಹದ್ದನ್ನು ಸರಿಪಡಿಸುವ ಕಾರ್ಯ ಆಗದಿದ್ದರೆ, ನಮ್ಮ ನದಿ, ಸರೋವರ, ವಾಯು ಎಲ್ಲವನ್ನೂ ಮಾಲಿನ್ಯ ಆವರಿಸಿ ನಾಶವಾಗಲಿದೆ. ಮನುಷ್ಯನ ಒಳಗೆ ಅಂತರಂಗ ಮಾಲಿನ್ಯಗಳಾದ ಲೋಭ, ಕ್ರೋಧ ತುಂಬಿದೆ. ಇಂತಹ ಅಂತರಂಗ ಮಾಲಿನ್ಯ ಸರಿಪಡಿಸುವ ಬಗ್ಗೆ ಸಂತರೂ ಶ್ರಮಿಸಬೇಕು. ಹಾಗೆಯೇ ರಾಜಕಾರಣಿಗಳೂ, ಸಾಮಾನ್ಯರೂ ಕೈಜೋಡಿಸಬೇಕು ಎಂದರು.

ಹೊಸದಾಗಿ ಕೆರೆ, ಬಾವಿ ತೋಡುವ ಬದಲು ಇದ್ದಿದ್ದನ್ನು ರಕ್ಷಿಸುವ ಪ್ರಯತ್ನ ನಡೆಯಲಿ. ನದಿ ಬತ್ತಿ ಹೋದರೆ ಮತ್ತೆ ನಿರ್ಮಾಣ ಸಾಧ್ಯವಿಲ್ಲ. ನದಿ ಬತ್ತದಂತೆ ನೋಡುವ ಜವಾಬ್ದಾರಿ ನಮ್ಮ ಮೇಲಿದೆ. ಸಂತರು, ಸಮಾಜ, ಸರಕಾರ ಈ ಮೂರು ಸಂಗಮಗಳಿಂದ ಪರಿಸರ, ಕೆರೆ, ನದಿ ರಕ್ಷಣೆ ಆಗಬೇಕಿದೆ. ಉದ್ಯಮ ಅಭಿವೃದ್ಧಿ ಮಾಡುವುದು ಸಂತಸದ ವಿಷಯ. ಆದರೆ ಉದ್ಯಮದ ಅಭಿವೃದ್ಧಿ ಹೆಸರಲ್ಲಿ ಪರಿಸರ ನಾಶ ಬೇಡ. ಸ್ವರ್ಣವಲ್ಲಿಯಲ್ಲಿ ಸ್ವರ್ಣಾಕ್ಷರದಲ್ಲಿ ಬರೆಯುವ ದಿನ ಇದು. ಪರಿಸರ ಹೋರಾಟದಲ್ಲಿ ನಾನು ಯಾವಾಗಲೂ ಸಿದ್ಧನಿದ್ದೇನೆ ಎಂದು ಪೇಜಾವರ ಶ್ರೀಗಳು ನುಡಿದರು.

ಶಿವೇನಹಳ್ಳಿಯ ರಾಮಕೃಷ್ಣ ಮಿಷನ್‌ನ ವಿಷ್ಣುಮಯಾನಂದ ಸ್ವಾಮೀಜಿಯವರಿಗೆ ವೃಕ್ಷಲಕ್ಷ ಪರಿಸರ ಪ್ರಶಸ್ತಿ-2014ವನ್ನು ಪ್ರದಾನ ಮಾಡಲಾಯಿತು. ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಪೀಠಾಧೀಶ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮೀಜಿ, ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಡಾ.ವಾಮನ್ ಆಚಾರ್ಯ, ಪ್ರೊ. ವೈ.ಬಿ.ರಾಮಕೃಷ್ಣ, ಪರಿಸರ ತಜ್ಞ ಸುರೇಶ ಹೆಬ್ಳೀಕರ್, ಶಾಂತಾರಾಮ ಸಿದ್ಧಿ ಹಾಗೂ ಇತರರು ಉಪಸ್ಥಿತರಿದ್ದರು.



ಶಿರಸಿ ತಾಲೂಕಿನ ಸೋಂದಾದಲ್ಲಿ ನಡೆದ ಕೆರೆ ಸಮ್ಮೇಳನ-14ರ ಸಮಾರೋಪದಲ್ಲಿ ಪೇಜಾವರ ಮಠಾಧೀಶ ಶ್ರೀವಿಶ್ವೇಶ್ವರ ತೀರ್ಥ ಮಹಾಸ್ವಾಮಿಗಳು ಮಾತನಾಡುತ್ತಿರುವುದು.